-ದಾರರಿಗೆ ಸರ್ವೇಕ್ಷಣೆಯಿಂದ ಹೊಸ ಹಕ್ಕು ಪತ್ರ ನೀಡಲಾಗಿದೆ. ಈಗ ಹಕ್ಕು ಪತ್ರ ನೀಡಲು ನಿರ್ವಸಿತರಿಂದ ಬಂದಿರುವ ಅರ್ಜಿಗಳು ಬಾಕಿ ಇರುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ನವ ಬಂದರು ನಿರ್ವಸತಿಕರಿಗೆ ಕಾಟಿಪೆಳ್ಳೆ ಬ್ಲಾಕ್‌ನಲ್ಲಿ 2725 ನಿವೇಶನಗಳನ್ನು ಮಂಜೂರು ಮಾಡಲಾಗಿದೆಯೆಂದು ಹೇಳಿದ್ದಾರೆ. ಇದನ್ನು ಬೇರೆ ಬೇರೆ ಹಂತದಲ್ಲಿ ಮಾಡಿದ್ದಾರೆ. ಈ ನಿವೇಶನಗಳನ್ನು ಮಂಜೂರು ಮಾಡಿದ ಮೇಲೆ ಆ ನಿವೇಶನಕ್ಕೆ ಸಂಬಂಧಪಟ್ಟ ಹಕ್ಕುಪತ್ರಗಳನ್ನು ಕೊಡುವುದು ಬಹಳ ತಡವಾಗಿದೆ. ಆಗ ಕಾಯಿದೆ ಇರಲಿಲ್ಲವೆಂದು ಹೇಳುತ್ತಾರೆ. ಕಾಯಿದೆ ಬಂದಮೇಲೆ ಎಲ್ಲರಿಗೂ ಹಕ್ಕುಪತ್ರಗಳನ್ನು ಕೊಡಬೇಕಾಗಿತ್ತು. ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟರೆ ಅವರು ಮಾರಾಟ ಮಾಡುವುದು ಅಥವಾ ಭೋಗ್ಯ ಹಾಕಲಿಕ್ಕೆ ಅನುಕೂಲವಾಗುವ ವ್ಯವಸ್ಥೆ ಮಾಡಬೇಕಾಗಿದೆ. ಅದು ಇನ್ನೂ ಮಾಡಲಿಲ್ಲ. ಆ ಕೆಲಸ ಉಳಿದಿದೆಯೆಂದು ನೀವೇ ಒಪ್ಪಿಕೊಂಡಿದ್ದೀರಿ, ಯಾವಾಗ ಅದನ್ನು ಪೂರೈಸುತ್ತೀರಿ? ಈ ಪ್ರಶ್ನೆಯ ಜೊತೆಯಲ್ಲಿ ಇನ್ನೊಂದು ಪ್ರಶ್ನೆ, ಅದೇನೆಂದರೆ ಬಂದರು ನಿರ್ಮಾಣಕ್ಕಾಗಿ ಜಮೀನು ಯಾರು ಕೊಟ್ಟಿದ್ದಾರೆ ಅವರಿಗೆ ವಾಸ ಮಾಡುವಂತಹ ಜಾಗದಲ್ಲಿ ರಸ್ತೆ ಮಾಡಿಕೊಟ್ಟಿಲ್ಲ, ದೀಪದ ವ್ಯವಸ್ಥೆಯಿಲ್ಲ, ನೀರಿನ ವ್ಯವಸ್ಥೆಯಿಲ್ಲ. ಇಷ್ಟು ವರ್ಷಗಳಾದರೂ ಅವರಿಗೆ ನೀವು ಯಾವ ವ್ಯವಸ್ಥೆಯನ್ನು ಮಾಡಲಿಲ್ಲ. ಅವರು ಗೋಳಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದುವರೆಗೆ ಹಕ್ಕುಪತ್ರಗಳನ್ನು ಕೊಟ್ಟಿಲ್ಲವೆಂದರೆ ಹಕ್ಕುಪತ್ರಗಳನ್ನು ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅದು ಅಲ್ಲದೆ ರಸ್ತೆ, ದೀಪ, ನೀರಿನ ವ್ಯವಸ್ಥೆ ಮಾಡುವುದಕ್ಕೆ ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ನಿವೇಶನ ಮಾಡುವ ಹಂತದಲ್ಲಿಯೇ ಮೇಲಿನ ಎಲ್ಲಾ ವ್ಯವಸ್ಥೆ ಮಾಡಲಿಕ್ಕೆ ತಿಳಿಸಲಾಗಿದೆ. ನಿವೇಶನ ಮಾಡುವ ಸಂದರ್ಭದಲ್ಲಿ ಈ ಎಲ್ಲಾ ಅನುಕೂಲಗಳನ್ನು ಮಾಡಲಿಕ್ಕೆ ಏನಾದರೂ ಹಣದ ಕೊರತೆಯಿದ್ದರೆ ಹೆಚ್ಚಿಗೆ ಹಣ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ.

ರೈತ ಕುಟುಂಬಕ್ಕೆ ಸಹಕಾರ ಸಂಘ ಸಂಸ್ಥೆಗಳಿಂದ ಸಾಲ ಸೌಲಭ್ಯಗಳು

259 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95 ರಿಂದ 98ರ ಮಾರ್ಚ್‌ವರೆಗೆ ರಾಜ್ಯದ ಎಷ್ಟು ಕೃಷಿ ಕುಟುಂಬಗಳಿಗೆ ಸಹಕಾರ ಸಂಘ ಸಂಸ್ಥೆಗಳಿಂದ ಸಾಲ ಸೌಲಭ್ಯ ದೊರತಿದೆ. ಹಾಗೂ ವಿತರಣೆಯಾದ ಸಾಲ ಸೌಲಭ್ಯದ ಮೊತ್ತ ಎಷ್ಟು? (ವರ್ಷಾವಾರು ವಿವರ ನೀಡುವುದು)*

ಆ) *ರಾಜ್ಯದಲ್ಲಿರುವ ಒಟ್ಟು ಕೃಷಿ ಕುಟುಂಬಗಳಲ್ಲಿ ಸಾಲ ಸೌಲಭ್ಯ ಪಡೆದ ಕೃಷಿ ಕುಟುಂಬಗಳ ಪ್ರಮಾಣ ಎಷ್ಟು? ಇದರಲ್ಲಿ ಸಣ್ಣ ಮಧ್ಯಮ ಹಾಗೂ ದೊಡ್ಡ ರೈತರಲ್ಲಿ ಸಾಲ ಸೌಲಭ್ಯ ಪಡೆದವರ ಪ್ರಮಾಣ ಎಷ್ಟು? ಕಳೆದ 3 ವರ್ಷದ ವರ್ಷಾವಾರು ವಿವರ ನೀಡಿರಿ.*

ಇ) ಈ ಮೊತ್ತವನ್ನು ರಾಜ್ಯದ ಒಟ್ಟು ಕೃಷಿಕ ಕುಟುಂಬಗಳಿಗೆ ವಿತರಿಸಿದರೆ ದೊರೆಯಬಹುದಾದ ಪ್ರಮಾಣ ಎಷ್ಟು ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) 1994-95ರಿಂದ 98ರ ಮಾರ್ಚ್‌ವರೆಗೆ ರಾಜ್ಯದ ಕೃಷಿ ಕುಟುಂಬಗಳಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಹಾಗೂ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ವಿತರಣೆಯಾದ ಸಾಲ ಸೌಲಭ್ಯದ ವಿವರ ಈ ಕೆಳಕಂಡಂತಿರುತ್ತದೆ.

ವರ್ಷ	ಸಾಲದ ವಿವರ	ಸಂಖ್ಯೆ	ಮೊತ್ತ (ಕೋಟಿಗಳಲ್ಲಿ)
1994-95	ಅಲ್ಪಾವಧಿ	518002	303.46
	ಮಧ್ಯಮಾವಧಿ	14755	24.41
	ಧೀರ್ಘಾವಧಿ	38144	107.16
1995-96	ಅಲ್ಪಾವಧಿ	654932	450.68
	ಮಧ್ಯಮಾವಧಿ	15368	40.24
	ಧೀರ್ಘಾವಧಿ	69028	153.66
1996-97	ಅಲ್ಪಾವಧಿ	672938	531.34
	ಮಧ್ಯಮಾವಧಿ	17519	37.24
	ಧೀರ್ಘಾವಧಿ	41638	168.07
1997-98	ಅಲ್ಪಾವಧಿ	850000	688.10
	ಮಧ್ಯಮಾವಧಿ	18462	37.84
	ಧೀರ್ಘಾವಧಿ	37120	177.58

ಆ) ರಾಜ್ಯದಲ್ಲಿ ಒಟ್ಟು ಕೃಷಿ ಕುಟುಂಬಗಳಲ್ಲಿ ಸಾಲ ಸೌಲಭ್ಯ ಪಡೆದ ಕೃಷಿ ಕುಟುಂಬಗಳ ಪ್ರಮಾಣ ಈ ಕೆಳಗಿನಂತಿದೆ

	ಶೇಕಡ ಪ್ರಮಾಣ	
ವರ್ಷ	ಅಲ್ಪಾವಧಿ / ಮಧ್ಯಮಾವಧಿ	ಧೀರ್ಘಾವಧಿ
1995-96	11.33	1.02
1996-97	11.65	0.72
1997-98	14.71	0.64

ಇದರಲ್ಲಿ ಸಣ್ಣ ಮಧ್ಯಮಾ ಮತ್ತು ದೊಡ್ಡ ರೈತರ ಪ್ರಮಾಣದ ಅನುಕ್ರಮವಾಗಿ ಪ್ರತಿಶತ 100ಕ್ಕೆ ಈ ಕೆಳಕಂಡಂತಿರುತ್ತದೆ.

ವರ್ಷ	ಅಲ್ಪಾವಧಿ ಮತ್ತು ಮಧ್ಯಮಾವಧಿ	
	ಸಣ್ಣ ಮತ್ತು ಅತೀ ಸಣ್ಣ ಶೇ. ಪ್ರಮಾಣ	ದೊಡ್ಡ ರೈತರ ಶೇ. ಪ್ರಮಾಣ
1995-96	51.21	48.79
1996-97	47.58	52.12
1997-98 (ತಾತ್ಕಾಲಿಕ)	48.00	52.00
	ಧೀರ್ಘಾವಧಿ	
1995-96	84.00	16.00
1996-97	80.15	19.85
1997-98	79.00	21.00

ಇ) ಈ ಮೊತ್ತವನ್ನು ರಾಜ್ಯ ಎಲ್ಲಾ ಕೃಷಿಕ ಕುಟುಂಬಗಳಿಗೆ ವಿತರಿಸಿದರೆ ಸರಾಸರಿ ಪ್ರಮಾಣದ ವರ್ಷಾವಾರು ವಿವರ ಈ ಕೆಳಗಿನಂತಿದೆ.

ವರ್ಷ	ಅಲ್ಪಾವಧಿ ಮತ್ತು ಮಧ್ಯಮಾವಧಿ	ಧೀರ್ಘಾವಧಿ
1995-96	780.00	ರೂ. 266.00
1996-97	920.00	ರೂ. 291.00
1997-98	1191.00	ರೂ. 300.00

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕೃಷಿ ಕುಟುಂಬಗಳ ಕವರೇಜ್ ಏನಿದೆ ಅದು ಬಹಳ ಕಡಿಮೆಯಿದೆ ಏನ್ನುವುದನ್ನು ತಾವು ಒಪ್ಪಿದ್ದೀರಿ. ಅದನ್ನು ಪ್ರತಿ ವರ್ಷ ನಿರ್ದಿಷ್ಟವಾಗಿ ಇಂತಿಷ್ಟು ಹೆಚ್ಚು ಮಾಡುತ್ತೇವೆ ಎನ್ನುವ ಬಗ್ಗೆ ತಾವು ಯಾವ ಕ್ರಮಗಳನ್ನು ಕೈಗೊಳ್ಳುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಏನು ಕೊಟ್ಟಿದ್ದೇನೆ ಅದರಲ್ಲಿಯೇ ಅವರ ಪ್ರಶ್ನೆಗೆ ಉತ್ತರವಿದೆ. ಬಹುಶಃ 1994-95ರಲ್ಲಿ 5 ಲಕ್ಷದ 18 ಸಾವಿರ ಕುಟುಂಬಗಳು ಇದ್ದರೆ ಇವತ್ತು 1997-98ನೇ ಸಾಲಿನಲ್ಲಿ ಅದು 8 ಲಕ್ಷದ 50 ಸಾವಿರ ಇದೆ. ಅಷ್ಟು ಕುಟುಂಬಗಳನ್ನು ನಮ್ಮ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಪ್ರತಿ ವರ್ಷ 20 ಪರ್ಸೆಂಟ್ ಹೆಚ್ಚು

ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ರೀತಿ ಹೆಚ್ಚು ಮಾಡಿಕೊಳ್ಳುತ್ತಾ ಹೋಗಿ ಮುರ್ನಾಲ್ಕು ವರ್ಷದಲ್ಲಿ ಎಲ್ಲಾ ಕುಟುಂಬಗಳಿಗೆ ಸಾಲ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಅದೇರೀತಿ ಮೆಂಬರ್‌ಶಿಪ್‌ಗೂ ಸಹಿತ ಅರ್ಜಿ ಕೊಟ್ಟರೆ ಆಗ ಬೇಕೆನ್ನುವುದು ಇದೆ. ಅರ್ಜಿ ಕೊಡಲಿಕ್ಕೆ ತೆಗೆಯಲಿಕ್ಕೆ ಅಲ್ಲಿ ಸ್ವಲ್ಪ ತೊಂದರೆಯಿದೆ. ಆ ರೀತಿಯ ಒಂದು ಕಲ್ಪನೆಯಿದೆ. ಅದಕ್ಕೆ ಮೆಂಬರ್‌ಶಿಪ್ ಹೆಚ್ಚು ಆಗುವಹಾಗೆ ಎಲ್ಲಾ ಜನಾಂಗದವರು ಕವರ್ ಆಗುವ ಹಾಗೆ ನೋಡುತ್ತೀರಾ? 1995-96ರಲ್ಲಿ 11.33 ಪರ್ಸೆಂಟ್ ಇತ್ತು. ಅದನ್ನು ತಾವು ಈಗ 14.91ಕ್ಕೆ ತಂದಿದ್ದೀರಿ. ಏರಿಕೆಯಲ್ಲಿ ಎಷ್ಟು ಏರಿಕೆ ಆಗಬೇಕಾಗಿತ್ತು ಅಷ್ಟು ಏರಿಕೆ ಆಗಿಲ್ಲ. ಅದಕ್ಕೆ ದಯವಿಟ್ಟು ವಿಶ್ವಾಸದಿಂದ ಒತ್ತು ಕೊಟ್ಟು ನೀವು ಎಲ್ಲಾ ಜನಾಂಗದವರಿಗೆ ಅಲ್ಲಿ ಸದಸ್ಯರಾಗುವಂತೆ ಮಾಡಿ ಹೊಸಬರಿಗೆ ಆದ್ಯತೆಯ ಮೇರೆಗೆ ಸಾಲ ಸಿಗುವಂತಹ ವ್ಯವಸ್ಥೆಯನ್ನೂ ಕೂಡ ತಾವು ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಎಲ್ಲಾ ಸದಸ್ಯರಿಗೂ ಮೆಂಬರ್‌ಶಿಪ್ ಸಿಗಬೇಕು, ಎಲ್ಲರಿಗೂ ಸಾಲ ಸಿಗಬೇಕೆನ್ನುವ ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ನಬಾರ್ಡ್‌ನವರು ನಮ್ಮ ಬೇಡಿಕೆ ಎಷ್ಟಿದೆ ಅಷ್ಟು ಕೊಡುತ್ತಿಲ್ಲ. ನಬಾರ್ಡ್‌ನವರ ಜೊತೆಯಲ್ಲಿ ಮಾತನಾಡಿ ಅವರು ಸಾಲ ಕೊಡಲಿಕ್ಕೆ ಒಪ್ಪುವಂತೆ ಪ್ರಯತ್ನ ಮಾಡಿ ಕೃಷಿ ಕುಟುಂಬದವರಿಗೆ ಎಲ್ಲರಿಗೂ ಸಾಲ ಒದಗಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ದೀರ್ಘಾವಧಿ ಸಾಲದೊಳಗೆ ಮೊದಲಿನ ಕವರೇಜ್ ಒಂದು ಪರ್ಸೆಂಟ್ ಇದೆ. 1995-96ರಲ್ಲಿ ಅದು ಪಾಯಿಂಟ್ 64 ಪರ್ಸೆಂಟ್ ಇದೆ. ಅದಕ್ಕೆ ಬಹಳಷ್ಟು ಮಂದಿ ಬೇರೆ ಬೇರೆ ಮೂಲಗಳಿಂದ ಸಾಲ ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನೂ ಸಹಿತ ಇದೇ ಪ್ರಮಾಣದಲ್ಲಿ ಹೆಚ್ಚು ಆಗುವಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ದೀರ್ಘಾವಧಿ ಸಾಲದಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಸಾಲ ಕೊಡುವುದು ಕಡಿಮೆಯಾಗಿರುವುದು ಸತ್ಯದ ಮಾತು. ಲ್ಯಾಂಡ್ ಬ್ಯಾಂಕ್‌ನವರು ಅಷ್ಟು ಚೆನ್ನಾಗಿ ಕೆಲಸ ಮಾಡದಿರುವುದರಿಂದ ಈ ರೀತಿಯಾಗಿದೆ. ಈಗಾಗಲೇ ಪ್ರಾಥಮಿಕ ಸಂಘಗಳ ಮುಖಾಂತರ ಮತ್ತು ಡಿಸಿಸಿ ಬ್ಯಾಂಕುಗಳ ಮುಖಾಂತರ ದೀರ್ಘಾವಧಿ ಸಾಲ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಒಟ್ಟಿನಲ್ಲಿ ಎಲ್ಲಾ ರೈತರಿಗೂ ದೀರ್ಘಾವಧಿ ಸಾಲ ಸಿಗುವ ವ್ಯವಸ್ಥೆಯನ್ನೂ ಕೂಡ ನಾವು ಮಾಡುತ್ತೇವೆ.

ಧಾರವಾಡ ಹಾಗೂ ಹುಬ್ಬಳ್ಳಿ ಕೃಷಿ ಹುಟ್ಟುವಳಿ ಮಾರುಕಟ್ಟೆಗಳಲ್ಲಿ ಶೀತಾಗಾರ ವ್ಯವಸ್ಥೆ

262 - ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಹಾಗೂ ಹುಬ್ಬಳ್ಳಿ ಕೃಷಿ ಹುಟ್ಟುವಳಿ ಮಾರುಕಟ್ಟೆಗಳಲ್ಲಿ ಶೀತಾಗಾರ (ಕೋಲ್ಡ್*